ಸೇರಿಸಿಕೊಳ್ಳುತ್ತಾರೆ. ಕೆಲವು ಕೈಗಾರಿಕೆಗಳಲ್ಲಿ, ಪಬ್ಲಿಕ್ ಸೆಕ್ಟಾರ್‌ಗಳಲ್ಲಿ, ಕಾರ್ಪೊರೇಷನ್ ಹಾಗೂ ಬೋರ್ಡ್‌ಗಳಲ್ಲಿ ಇಂತಹ ಕೆಲಸ ನಡೆಯುತ್ತಿದೆ. ಆದ್ದರಿಂದ ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಸಪರೇಟ್ ಪಟ್ಟಿ ಮಾಡಿ, ಅದನ್ನು ಕಂಪ್ಯೂಟರ್‌ಗೆ ಅಳವಡಿಸಿ ಕೆಲಸ ಕೊಡುವ ಕಾರ್ಯಕ್ರಮ ಹಾಕಿಕೊಳ್ಳುತ್ತೀರಾ ?

ಶ್ರೀ ಎಸ್. ಕೆ. ಕಾಂತ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿರತಕ್ಕದ್ದು ಅತಿ ಉತ್ತಮವಾದ ಪ್ರಶ್ನೆ. ನಾವು ಈಗಾಗಲೇ ಏಳು ಸೆಂಟರ್‌ಗಳಲ್ಲಿ ಕಂಪ್ಯೂಟರೀಕರಣ ಮಾಡಿದ್ದೇವೆ. ಕೆಲಸ ಪ್ರಾರಂಭಿಸಿದ್ದೇವೆ. ಹಂತಹಂತವಾಗಿ ಎಲ್ಲಾ ಸೆಂಟರ್‌ಗಳಲ್ಲಿ ಈ ಬಂದು ಕಂಪ್ಯೂಟರ್ ಸಿಸ್ಟಮ್ ಉಪಯೋಗ ಮಾಡಿದರೆ ಇಂತಹ ಬಂದು ಅವ್ಯವಸ್ಥೆ ತಪ್ಪುವುದು. ಈ ರೋಸ್ಟರ್ ಸಿಸ್ಟಮ್‌ನಲ್ಲಿ ಕೆಲವು ಎಕ್ಸೆಪ್ಷೇಂಜ್‌ನಿಂದ.....

ಶ್ರೀ ಬಿ. ಬಸವಲಿಂಗಪ್ಪ —ನಿಕಿಷ್ಟು ವಿನಯಪೂರ್ವಕವಾಗಿ ಮಾತನಾಡುತ್ತೀರಿ ?

ಶ್ರೀ ಎಸ್. ಕೆ. ಕಾಂತ.—ನನ್ನ ಧಾಟಿಯೇ ಹಾಗೆ. ರೋಸ್ಟರ್ ಸಿಸ್ಟಮ್ ಪ್ರಕಾರ ಮಾಡದೇ ಇರತಕ್ಕದ್ದರ ಬಗ್ಗೆ ಎಷ್ಟೋ ಕಡೆಯಿಂದ ಇಂತಹ ಬಂದು ವಾದ ಮತ್ತು ವಿವಾದಗಳು ಬಂದಿವೆ. ಆದಕ್ಕೋಸ್ಕರ ಅಂತಹ ಪಟ್ಟಿಯನ್ನು ಮಾಡಬೇಕೆಂದು ಸೂಚನೆ ಕೂಡಾ ಕೊಟ್ಟಿದ್ದಾರೆ. ಇದನ್ನೆಲ್ಲಾ ಗಮನದಲ್ಲಿ ಇಟ್ಟುಕೊಂಡು ಅಂತಹ ಬಂದು ಪಟ್ಟಿ ಮಾಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ.

ಸ್ಟೈಫೆಂಡರಿ ಪದವೀಧರರ ಜೇಷ್ಠತಾ ಪಟ್ಟಿ.

೧೦೪೩. ಶ್ರೀ ಸಿ. ಎಂ. ಉದಾಸಿ (ಹಾನಗಲ್).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸ್ಟೈಫೆಂಡರಿ ಪದವೀಧರರನ್ನು ಸರಕಾರಿ ಸೇವೆಯಲ್ಲಿ ನೇಮಕಾತಿ ಮಾಡಿಕೊಳ್ಳುವುದರ ಸಲುವಾಗಿ ಅವರ ಜೇಷ್ಠತಾ ಯಾದಿಯನ್ನು ಮಾಡಲಾಗಿದೆಯೆ?

ಆ) ಕರ್ನಾಟಕ ರಾಜ್ಯ ಪತ್ರ ದಿನಾಂಕ ೫-೬-೧೯೮೭ರಲ್ಲಿ ಅಧಿಕೃತವಾಗಿ ಪ್ರಕಟಿಸಲಾದ ನಂ. ಡಿಟಿಓಆರ್ ೪೮ ಎಸ್‌ಎಸ್‌ಸಿ ೮೬, ದಿನಾಂಕ ೪-೬-೧೯೮೭ರ ಪ್ರಕಾರ ಆರು ತಿಂಗಳಾದರೂ ಈ ಯಾದಿ ಮಾಡದೇ ಇರುವುದರಿಂದ ಅವರನ್ನು ಸೇವೆಯಲ್ಲಿ ತೆಗೆದುಕೊಳ್ಳುವ ಸಲುವಾಗಿ ತೊಂದರೆಯಾಗಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ?

ಶ್ರೀ ಎಸ್. ಕೆ. ಕಾಂತಾ (ಕಾರ್ಮಿಕ ಸಚಿವರು).—

ಅ) ಜೇಷ್ಠತಾ ಪಟ್ಟಿಯನ್ನು ತಯಾರು ಮಾಡಲಾಗಿದೆ.

ಆ) ಬಂದಿದೆ.

ಶ್ರೀ ಸಿ. ಎಂ. ಉದಾಸಿ.—ಮಾನ್ಯ ಅಧ್ಯಕ್ಷರೇ, ಜೇಷ್ಠತಾ ಪಟ್ಟಿಯು ಯಾದಿ ಹೊರಡಿಸಿದ ನಂತರ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಬೇಕಾದರೆ ಶೇಕಡಾ ೪೦ ಅಭ್ಯರ್ಥಿಗಳಿಗೆ ಸಂದರ್ಶನ ಇಲ್ಲದೇ ಮಾಡಬೇಕೆಂದು ಕ್ರಮ ಇದೆ. ಇದನ್ನು ತಾವು ಕಾರ್ಯಗತ ಮಾಡಿದ್ದೀರಾ?

ಶ್ರೀ ಎಸ್. ಕೆ. ಕಾಂತ.—ಅಧ್ಯಕ್ಷರೇ, ೧-೧-೮೮ರಲ್ಲಿ ರಾಜ್ಯದ ವಿವಿಧ ಇಲಾಖೆಯಲ್ಲಿ ಕೆಲಸ ಮಾಡತಕ್ಕವರ ಜೇಷ್ಠತಾ ಪಟ್ಟಿಯನ್ನು ತಯಾರು ಮಾಡಿದ್ದೇವೆ. ಇದು ತಯಾರು ಆದನಂತರ ವಿವಿಧ ಇಲಾಖೆಗಳ ೬೨೨ ಜಾಗಗಳಿಗೆ ಅಭ್ಯರ್ಥಿಗಳ ಹೆಸರುಗಳನ್ನು ಕಳುಹಿಸಿಕೊಟ್ಟಿದ್ದೇವೆ.

ಶ್ರೀ ಆರ್. ವೆಂಕಟರಾಮಯ್ಯ ಇನ್ನೂ ೬ ಸಾವಿರ ಜನ ಇದ್ದಾರೆ. ಈಗ ೬೨೨ ಜನಕ್ಕೆ ಕೊಟ್ಟಿದ್ದೀರೆಂದರೆ, ಉಳಿಕ್ಕವರನ್ನು ತುಂಬಲು ಇನ್ನೂ ೧೦ ವರ್ಷಗಳು ಬೇಕಾಗುತ್ತದೆ.

ಶ್ರೀ ಎಸ್. ಕೆ. ಕಾಂತ.—''ಸಿ'' ಗ್ರೂಪ್‌ನಲ್ಲಿ ನಾವು ಭರ್ತಿ ಮಾಡಬೇಕಾಗುತ್ತದೆ. ಟೀಚರ್ಸ್ ಹಾಗೂ ಬೇರೆ ಬೇರೆ ಹುದ್ದೆಗಳು ಭರ್ತಿ ಆಗುತ್ತಿವೆ. ಹೀಗೆ ಎಲ್ಲಾ ಜಾಗಗಳು ಭರ್ತಿ ಆಗುತ್ತಾ ಹೋದಲ್ಲಿ ಇನ್ನು ಒಂದು ಅಥವಾ ಒಂದೂವರೆ ವರ್ಷದಲ್ಲಿ ಇರುವ ೬ ಸಾವಿರ ಜನರು ಏನಿದ್ದಾರೆ, ಇವರೆಲ್ಲಾ ಖಾಯಂ ಆಗಬಹುದು ಎನ್ನುವ ವಿಶ್ವಾಸ ನನಗೆ ಇದೆ.